# ಶಿವರಾಮಕಾರಂತರ ಕಾದಂಬರಿಗಳಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ

**ಡಾ. ಎಸ್. ಶಿವಣ್ಣ ಬೆಳವಾಡಿ**
**ಸಹಾಯಕ ಪ್ರಾಧ್ಯಾಪಕರು**
**ವಿಶ್ವವಿದ್ಯಾನಿಲಯ ಕಲಾ ಕಾಲೇಜು**
**ತುಮಕೂರು**

ಕನ್ನಡದ ಮಹತ್ವದ ಕಾದಂಬರಿಕಾರಾದ ಡಾ. ಕೆ. ಶಿವರಾಮಕಾರಂತರು ಬರೀ ಕಾದಂಬರಿಕಾರರು ಮಾತ್ರವಲ್ಲ ಕತೆ, ಕಾವ್ಯ, ನಾಟಕ, ವಿಮರ್ಶೆ, ಪ್ರವಾಸ, ಆತ್ಮಚರಿತ್ರೆ ಹಾಗೂ ಯಕ್ಷಗಾನ ಬಯಲಾಟ, ವಿಜ್ಞಾನ, ಸಿನಿಮಾ, ರಾಜಕೀಯ ಮೊದಲಾದ ಹತ್ತು ಹಲವು ಪ್ರಕಾರಗಳಲ್ಲೂ ತೊಡಗಿಕೊಂಡು ಸಾಹಿತ್ಯ ಕೃಷಿ ಮಾಡಿದವರು ಕಾರಂತರು. 'ಆಡು ಮುಟ್ಟದ ಸೊಪ್ಪಿಲ್ಲ' ಕಾರಂತರು ಬರೆಯದ ಸಾಹಿತ್ಯವಿಲ್ಲ, ಎಂಬ ಮಾತಿಗೆ ಕಾರಂತರು ಬಾಜನರಾಗಿದ್ದು, ಕನ್ನಡದಲ್ಲಿ ಜನಜನಿತಮಾತಾಗಿದೆ. ಮುಖ್ಯವಾಗಿ ಕಾರಂತರ ಪ್ರತಿಭೆ ಎದ್ದು ಕಾಣುವುದು ಕಾದಂಬರಿ, ಯಕ್ಷಗಾನ ಬಯಲಾಟ, ಮಕ್ಕಳ ಕುರಿತ ಕಥಾಸಾಹಿತ್ಯದಲ್ಲಿ, ಇಲ್ಲೆಲ್ಲಾ ಸಮಾಜದ ವಸ್ತು ಸ್ಥಿತಿ ಮತ್ತು ಜನರ ಮನಸ್ಥಿತಿ ಎರಡನ್ನು ಮುಖಾಮುಖಿಮಾಡಿ ಚಿಂತಿಸುವುದು ಎದ್ದು ಕಾಣಿಸುತ್ತದೆ. ಹಾಗೆ ಸತತ ಸತ್ಯಾನ್ವೇಷಣೆಯ ಮೂಲಕ ಬದುಕಿದ ಜೀವಂತ ಅನುಭವಗಳನ್ನು ಎಕ್ಕಿ ತೆಗೆಯುವ ಕಾರಂತರ ಅನುಭವ ವಿಶಾಲವಾದುದು ಹಾಗೂ ಆಳವಾದುದು ಕೂಡ. ಕಾರಂತರ ಕಾದಂಬರಿಗಳಲ್ಲಿ ಹೆಣ್ಣಿನ ಪಾತ್ರಗಳು ಮಹತ್ವದ ಪಾತ್ರಗಳಾಗಿದ್ದು, ಜೀವಂತ ಅನುಭವಗಳನ್ನು ಕಟ್ಟಿಕೊಡುತ್ತವೆ. ಕಾರಂತರು ಸುಮಾರು ನಲ್ವತ್ತೈದು ಕಾದಂಬರಿಗಳನ್ನು ಬರೆದಿದ್ದು ಅಲ್ಲೆಲ್ಲ ಮಹಿಳಾ ಪಾತ್ರಗಳು ಇದ್ದರೂ ಪ್ರತಿನಿಧಿಕವಾಗಿ 'ಮರಳಿ ಮಣ್ಣಿಗೆ' ಸನ್ಯಾಸಿಯ ಬದುಕು, ನಂಬಿದವರ ನಾಕ–ನರಕ, ಸರಸಮ್ಮನ ಸಮಾಧಿ, ಕನ್ಯಾಬಲಿ, ಮೂಕಜ್ಜಿಯ ಕನಸುಗಳು, ಕಾದಂಬರಿಯ ಮಹಿಳಾ ಪಾತ್ರಗಳನ್ನು ಮಾತ್ರ ಇಲ್ಲಿ ಚರ್ಚೆಗೆ ಬಳಸಿಕೊಳ್ಳಲಾಗಿದೆ.

'ಮರಳಿ ಮಣ್ಣಿಗೆ' ಕಾದಂಬರಿ ಕುರಿತು ಎಲ್ಲಾ ವಿಮರ್ಶೆಗಳು ಹೇಳುತ್ತ ಬಂದುದು ಮೂರು ತಲೆಮಾರಿನ ಕಾದಂಬರಿ ಎಂದು: ಮೊಮ್ಮಗ, ಮಗ, ಅಜ್ಜನ ತಲೆಮಾರುಗಳನ್ನು ಕ್ರಮವಾಗಿ ಅಳೆದು ಗುರ್ತಿಸುವ ಮೂಲಕ ಇದು ಪುರುಷ ಪಾತ್ರಗಳನ್ನು ಪ್ರಧಾನವಾಗಿ ಮಹಿಳಾ ಪಾತ್ರಗಳನ್ನು ಗೌಣಗೊಳಿಸಿ ನೋಡಿದಾಗ ಹುಟ್ಟುವ ಚಿಂತನೆ, ಇಡಿ ಕಾದಂಬರಿಯನ್ನು ಔಚಿತ್ಯ ಪೂರ್ಣ ಪ್ರಜ್ಞೆಯಿಂದ ನೋಡಿದಾಗ ಬೇರೆಯೆ ಚಿಂತನೆಮೂಡಲು ಸಾಧ್ಯ. ಮೂರು ತಲೆಮಾರಿನ ಬದುಕನ್ನು ಎರಡು ತಲೆಮಾರುಗಳಲ್ಲೆ ಅಳೆಯಬಹುದಾಗಿದೆ. ರಾಮ ಐತಾಳರ ಹೆಂಡ್ತಿಯರಾದ ಪಾರ್ವತಿ–ಸತ್ಯಭಾಮ ಹಾಗೂ ಐತಾಳರ ತಂಗಿ ವಿಧವೆ ಸರಸೋತಿ ಒಂದು ತಲೆಮಾರು, ಲಚ್ಚನ ಹೆಂಡತಿ ಹಾಗೂ ರಾಮನ ತಾಯಿ, ನಾಗವೇಣಿ ಇನ್ನೊಂದು ತಲೆಮಾರು, ಎಂಬದಾಗಿ ವಿಭಾಗಿಸಿಕೊಂಡಾಗ ಎರಡೇ ತಲೆಮಾರಿನ ಬದುಕು ಕಂಡುಬರುತ್ತದೆ. ಹಾಗೆ ನೋಡಿದರೆ ರಾಮ ಐತಾಳ, ಲಚ್ಚ, ರಾಮರ ತಲೆಗಳ ಕಾಳಘಟ್ಟದ ಆಧಾರದ ಮೇಲೆ ಮೂರು ತಲೆಮಾರು ಎಂದು ಗುರ್ತಿಸುವುದು ಸತ್ವಹೀನ ಜೀವನದ ಔಪಚಾರಿಕವಾದ ಕ್ರಮವಾಗುತ್ತದೆ. ಪಾರ್ವತಿ–ಸತ್ಯಭಾಮ, ಸರಸೋತಿ ಹಾಗೂ ನಾಗವೇಣಿಯರ ಮೂಲಕ ಎರಡು ತಲೆಮಾರಿನ ಕಾದಂಬರಿ ಎಂದು ಗುರ್ತಿಸುವುದು ಔಚಿತ್ಯ ಪೂರ್ಣವಾದುದಾಗುತ್ತಿದೆ. ಏಕೆಂದರೆ ಇಲ್ಲಿ ಬರುವ ಪುರುಷಪಾತ್ರಗಳು ಔಚಿತ್ಯ ಪೂರ್ಣವಾಗಿ ಬದುಕುವುದೇ ಇಲ್ಲ. ರಾಮ ಐತಾಳರು ಪೌರೋಹಿತ್ಯ ಮಾಡುತ್ತ ಮನೆಯಿಂದ ಹೊರಗೆ ಹೆಚ್ಚು ಕಾಲ ಇದ್ದುದು, ಲಚ್ಚ ಸ್ವೇಚ್ಛಾಚಾರಿಯಾಗಿ

ಮನೆಬಿಟ್ಟು ಅಲೆದವನು, ಇನ್ನು ಮೂರನೆ ತಲೆಮಾರಿನ ರಾಮ ಉದ್ಯೋಗಕ್ಕಾಗಿ ಮುಂಬೈಯಂತ ನಗರ ಸುತ್ತಿದವನು. ಇವರ್‍ಯಾರು ಮನೆಯಲ್ಲಿ ನೆಲೆನಿಂತವರಲ್ಲ. ಆದರೆ ಕಷ್ಟ-ನಷ್ಟ ಸಂಕಷ್ಟಗಳ ನಡುವೆಯೂ ಮನೆಯಲ್ಲಿ ನೆಲೆನಿಂತು ಬದುಕಿದವರು. ಪಾರ್ವತಿ-ಸತ್ಯಭಾಮ, ಸರಸೋತಿ ಹಾಗೂ ನಾಗವೇಣಿ ಯವರು. ಹಾಗಾಗಿ ಪುರುಷ ಪ್ರಧಾನ ನೆಲೆಯಲ್ಲಿ ಮೂರು ತಲೆಮಾರಿನ ಕಾದಂಬರಿ ಎಂದು ಅಳೆಯದೆ ಮಹಿಳಾ ಪ್ರಧಾನತೆಯ ಆಧಾರದ ಮೇಲೆ ಎರಡು ತಲೆಮಾರಿನ ಕಾದಬರಿ ಎಂದು ಕರೆಯುವುದು ಔಚಿತ್ಯಪೂರ್ಣವಾದುದಾಗುತ್ತದೆ.

'ಸನ್ಯಾಸಿಯ ಬದುಕು' ಕಾದಂಬರಿಯಲ್ಲಿ ಬರುವ ರುಕ್ಮಾಯಿ ಮತ್ತು ಸುಮಿತ್ರೆ ಪಾತ್ರಗಳು ಪರಿಸ್ಥಿತಿಯನ್ನು ಹೆದರಿಸಿ ನಿಲ್ಲುವ ಗಟ್ಟಿಪಾತ್ರಗಳಾಗಿವೆ. ಸುಮಿತ್ರೆಯ ಗಂಡ ಶಂಕರರಾಯ ಜೂಜಾಟದಲ್ಲಿ ಪಾಪರ್ ಆಗಿ ಮನೆ, ಮಕ್ಕಳು, ಮಡದಿ ಬಿಟ್ಟು ಹೆಣ್ಣು ಮಾಯೆ ಎಂದು ಮಠಕಟ್ಟಿಕೊಂಡು ಸನ್ಯಾಸಿಯಾಗಿ ಬಿಂಬಿಸಿಕೊಂಡು, ದೇವರೆಂದು ಸಂಭೋದಿಸಿಕೊಂಡು ಕೃಷ್ಣಾನಂದ ಸ್ವಾಮೀಜಿಯಾಗಿ ಹೆಂಗೆಳೆಯರ ಶಿಷ್ಯವೃಂದದಿಂದ ಪೂಜಿಸಿಕೊಳ್ಳುವುದು: ಒಡನಾಟದಲ್ಲಿಟ್ಟುಕೊಳ್ಳುವುದು ಶಂಕರರಾಯನ ಇನ್ನೊಂದು ಚಾಳಿಯಾಗುತ್ತದೆ. ಇದಕ್ಕೆ ಭೀನ್ನವಾಗಿದ್ದ ರುಕ್ಮಾಯಿ ಜೀವನ ಪೂರ್ತಿ ಸನ್ಯಾಸಿಯಾಗಿದ್ದು ಇತರರ ಜೀವನಕ್ಕೆ ಸುಮಾರ್ಗವನ್ನು ತೋರಿಸಲು ಮುಂದಾಗುತ್ತಾಳೆ.

ಶಂಕರರಾಯನು ಕೃಷ್ಣಾನಂದನಾಗಿ ಹಲವಾರು ಕುಟುಂಬಗಳನ್ನು ಉದ್ಧಾರ ಮಾಡುತ್ತಿದ್ದಾನೆ ಎಂಬ ಸುದ್ಧಿ ಎಲ್ಲೆಡೆ ಹರಡಿಕೊಳ್ಳುತ್ತದೆ. ಇದರಿಂದಾಗಿ ಆಶ್ಚರ್ಯಶ್ಚಕಿತಳಾದ ಸುಮಿತ್ರೆಯು ಮಕ್ಕಳೊಂದಿಗೆ ನೋಡಲು ಹೋಗುತ್ತಾಳೆ. ಆ ಸಂದರ್ಭದಲ್ಲಿ ರುಕ್ಮಾಯಿ ಹೇಳುವ ಮಾತುಗಳು ಗಮನಾರ್ಹವಾಗಿವೆ, "ಮಗು ನೀನು ಯಾಕೆ ಅಳುತ್ತೀಯ! ಎಂದೋ ನೀನು ಅವನ ಯೋಚನೆ ಬಿಟ್ಟೇದ್ದೀ. ತನ್ನ ಸಂಸಾರದ ಕತ್ತು ಹಿಸುಕಿ ಜಗತ್ತಿನ ಸಂಸಾರಗಳನ್ನು ಉದ್ಧರಿಸುವವರು ಉದ್ಧರಿಸಲಿ ನನಗೆ ಅಂತಹದರಲ್ಲಿ ನಂಬಿಕೆಯಿಲ್ಲ, (ಡಾ. ಶಿವರಾಮ ಕಾರಂತ, ಸನ್ಯಾಸಿಯ ಬದುಕು' ಹರ್ಷ ಪ್ರಕಟಣಾಲಯ, ಪುತ್ತೂರು. ದ.ಕ. ಜಿಲ್ಲೆ. 1961. ಪುಟ – 184) ಎಂಬುದಾಗಿ ಗಟ್ಟಿತನದ ಮಾತುಗಳನ್ನಾಡಿ, ಪೊಳ್ಳು ವ್ಯಕ್ತಿಗಳಿಂದ ದೂರ ನಿಂತು ಬದುಕುವ ರುಕ್ಮಾಯಿಯ ಮಾತುಗಳು ಸುಮಿತ್ರೆಯಲ್ಲಿ ಆತ್ಮ ವಿಶ್ವಾಸ ಮೂಡಿಸುತ್ತದೆ. ಅನಂತರ ಸುಮಿತ್ರೆಯೂ ಈಸಬೇಕು ಇದ್ದುಜಯಿಸಬೇಕು ಎನ್ನುವಂತೆ ಚಲದಿಂದ ಬದುಕುತ್ತಾಳೆ.

'ನಂಬಿದವರ ನಾಕ-ನರಕ' ದಲ್ಲಿ ಬರುವ ವಾಗ್ದೇವಿ ಮತ್ತು ಸತ್ಯಭಾಮೆಯರ ಪಾತ್ರಗಳು ಜೀವಂತ ಅನುಭವವಗಳಿಗೆ ಸಾಕ್ಷಿಯಾಗಿದೆ. ಹಾಗೆ ಯಾವುದು ಸರಿ ಯಾವುದು ತಪ್ಪು ಎಂಬ ನಿರ್ಣಯಕ್ಕೂ ಪಾತ್ರವಾಗಿದೆ. ವಾಗ್ದೇವಿಯ ಗಂಡ ನಾಗೇಂದ್ರ ತನ್ನ ಜಾತಿ ಮುಚ್ಚಿಟ್ಟು ಮದುವೆಯಾಗುತ್ತಾನೆ. ಜಾತಿಯಲ್ಲಿ ಅತಿಯಾದ ನಂಬಿಕೆ ಇಟ್ಟ ವಾಗ್ದೇವಿ ನಾಗೇಂದ್ರನ ವಂಚನಾಬುದ್ದಿಯನ್ನು ವಿರೋಧಿಸಿ ಸಂಸಾರವನ್ನು ವ್ಯಸನಗೊಳಿಸಿಕೊಂಡು ತನ್ನ ಬದುಕನ್ನು ದುರಂತವಾಗಿಸಿಕೊಳ್ಳುತ್ತಾಳೆ. ಜಾತಿ, ಸಂಸ್ಕೃತಿಯಲ್ಲಿ ಅತಿಯಾದ ನಂಬಿಕೆ ಇಟ್ಟುಕೊಂಡಿದ್ದ ವಾಗ್ದೇವಿಯು ಬದುಕಿನಲ್ಲಿ ದುರಂತ ತಂದುಕೊಳ್ಳುತ್ತಾಳೆ.

ಸತ್ಯಭಾಮೆ-ಸುಬ್ರಾಯನನ್ನು ಮದುವೆಯಾಗುತ್ತಾಳೆ. ಸತ್ಯಭಾಮೆಯ ಮಗುವಿನಲ್ಲಿ ಇರುವ ಊನತೆಯಿಂದಾಗಿ (ಕೈಯಲ್ಲಿನ ಆರು ಬೆರಳುಗಳು ಇರುವ) ಗಂಡನ ಮನೆಯಿಂದ ದೂರಾಗುತ್ತಾಳೆ. ಆನಂತರ ಪರಮನ ಅಕ್ಕರೆಯನ್ನು ಪ್ರೀತಿಯಾಗಿ ಬಯಸಿ ತಿರಸ್ಕಾರಕ್ಕೊಳಗಾದರು ಮತ್ತೆ ವಿನಾಯಕನೊಂದಿಗೆ ಸೇರಿ ಸತ್ಯಭಾಮೆ ಜೀವನದ ಸುಖ ಪಡೆಯುತ್ತಾಳೆ.

ವಾಗ್ದೇವಿ ಮತ್ತು ಸತ್ಯಭಾಮೆ ಇಬ್ಬರು ವಿರುದ್ದ ದಿಕ್ಕುಗಳಿದ್ದಂತೆ ವಾಗ್ದೇವಿಯು ಜಾತಿ, ಧರ್ಮ, ಸಂಸ್ಕೃತಿ ದೇವರಲ್ಲಿ ನಂಬಿಕೆಯಿಟ್ಟು ನಿಧಿ ತೋರಿಸಬಂದ ಸ್ವಾಮೀಜಿಯಿಂದ ಹತ್ಯೆಗೊಳಗಾಗಿ ಸಾಯುತ್ತಾಳೆ. ಸತ್ಯಭಾಮೆಯ ದೇವರೆಂಬುದು ನಂಬಿಕೆ ಇದ್ದವರಿಗೆ ಇದ್ದಾನೆ, ಇಲ್ಲದವರಿಗೆ ಇಲ್ಲ ಎಂದು ಭಾವಿಸಿಕೊಳ್ಳುತ್ತ ಪ್ರಕೃತಿದತ್ತವಾದ ಸಹಜ ಬದುಕನ್ನು ನಂಬಿ ಸ್ವರ್ಗ ಸುಖ ಪಡೆಯುತ್ತಾಳೆ. ಕಾಮ ಎಂಬುದು ಬದುಕಿನಲ್ಲಿ ಸ್ವಾಭಾವಿಕ ಹಾಗೂ ಅನಿವಾರ್ಯವಾದುದು ಇದನ್ನು ಅಸಹ್ಯ ಪಟ್ಟುಕೊಂಡು ನೋಡಿದರೆ ಬದುಕು ಏರು-ಪೇರುಗಳಾಗುವ ಸಾಧ್ಯತೆ ಹೆಚ್ಚು, ಜೊತೆಗೆ ಮಾನಸಿಕ ಅಸ್ವಸ್ಥವು ಆಗಿ ದುರಂತಕ್ಕೆ ಒಳಗಾಗಬೇಕಾಗುತ್ತದೆ. ಈ ತಿಳುವಳಿಕೆಯನ್ನು 'ಸರಸಮ್ಮನ ಸಮಾಧಿ' ಕನ್ಯಾಬಲಿ, ಹಾಗೂ ಮೂಕಜ್ಜಿಯ ಕನಸುಗಳು' ಕಾದಂಬರಿಯಲ್ಲಿ ಕಾಣಬಹುದು. ಕಾಮದವಾಸನೆಯಿಂದ ದುರಂತಕ್ಕೆ ಒಳಗಾಗುವವರೆಲ್ಲ ಮಹಿಳೆಯರೆ ಆಗಿರುವುದು ಇಲ್ಲಿ ಗಮನಾರ್ಹ. ಪ್ರಕೃತಿ ದತ್ತವಾದ ಬದುಕಿಗೆ ಅನುಗುಣವಾಗಿ ಬದುಕಲು ಸಂಪ್ರದಾಯ ಬಿಡುವುದಿಲ್ಲ. ವಿರುದ್ದ ನಿಂತ್ತರೆ ಸಮಾಜದಿಂದ ಬಹಿಷ್ಕಾರ ಕಟ್ಟಿಟ್ಟ ಬುತ್ತಿ. ಇಂತಹ ನಿಲುವುಗಳನ್ನು ಅಲ್ಲಾಡಿಸುವ ಪಾತ್ರಗಳಾಗಿವೆ. ಮೂಕಜ್ಜಿ, ಸರಸಮ್ಮ, ಮಾಲತಿ ಮೊದಲಾದವರು ಮೂಕಜ್ಜಿಯ ಎಂಬ ಹೆಸರೆ ಇಲ್ಲಿ ಅರ್ಥಪೂರ್ಣ ವಾಸ್ತವತೆಗೆ ಬಾಯಿ ತೆಗೆಯಬೇಡ ಎಂಬ ಪ್ರತಿರೂಪದ ಹೆಸರು ಮೂಕಜ್ಜಿ. ಆದರೆ ಈ ಮೂಕಜ್ಜಿ ವ್ಯವಸ್ಥೆಯ ವಿರುದ್ಧ ಸಿಡಿದೇಳುತ್ತಾಳೆ.

ಸುಬ್ಬರಾಯ ಶಿವಲಿಂಗವನ್ನು 'ಪಾಣೀಪೀಠ' ಎಂದು ಕರೆದರೆ ಮೂಕಜ್ಜಿಯು ಇದು ಶಿವಲಿಂಗ ಮಾತ್ರ ಅಲ್ಲ, ಲೈಂಗಿಕತೆಯ ಪ್ರತೀಕ, ಸೃಷ್ಟಿಯ ಚಿತ್ರಣವಾಗಿದೆ. ಹೆಣ್ಣು ಗಂಡಿನ ಸಮಾಗಮದ ಸಂಕೇತವೇ ಈ ಮೂರ್ತಿ ಎಂಬುದಾಗಿಯೂ, ಬೆತ್ತಲಾಗುವುದು ತಪ್ಪಲ್ಲ ಸಮಾಜದ ಮುಕ್ತ ಸ್ಥಿತಿಯನ್ನು ತಿಳಿಸಿಕೊಡುವ ಪ್ರತೀಕ ಎನ್ನುವ ನಿಲುವು ಅರ್ಥಪೂರ್ಣವಾದುದು. ಏಕೆಂದರೆ ಎಷ್ಟೋ ಆಸೆ-ಆಕಾಂಕ್ಷೆಗಳಲ್ಲಿಯೇ ಕೊರಗಿದ ಮೂಕಜ್ಜಿ ಇಂತಹ ವೈಚಾರಿಕ ಹಾಗೂ ವಾಸ್ತವಿಕ ಚಿಂತನೆಗಳನ್ನು ಹೊರಹಾಕುವ ಮೂಲಕ ಸಂಪ್ರದಾಯಬದ್ದ ವ್ಯವಸ್ಥೆ ಮೀರಿ ನಿಲ್ಲುವುದು ಕಂಡು ಬರುತ್ತದೆ.

'ಸರಸಮ್ಮನ ಸಮಾಧಿ'ಯ ಸರಸಮ್ಮ ಅಂತರಂಗದಲ್ಲಿಯೇ ನೋವುಂಡವಳಾಗಿದ್ದಾಳೆ, ರೋಗಿಷ್ಟ ಗಂಡನನ್ನು ಮಾದುವೆಯಾಗಿ ಅವನ ಸಾವಿನ ಜತೆ ಸುಟ್ಟು ಬೂದಿಯಾದ ದುರ್ದೈವಿಯಾದವಳು ಸರಸಮ್ಮ. ಸರಸಮ್ಮನ ದೇಹ ಸುಟ್ಟು ಬೂದಿಯಾದರು ಅವಳ ಅಂತರಂಗ ಬೂದಿಯಾಗದೆ ಬೆಳ್ಳಕ್ಕನ ರೂಪದಲ್ಲಿ ಪ್ರೇತವಾಗಿ ಚಂದ್ರಣ್ಣನಲ್ಲಿ ಪ್ರೇಮ ಭಿಕ್ಷೆ ಬೇಡುತ್ತಾಳೆ. ಚಂದ್ರಣ್ಣ ಬೆಳ್ಳಕ್ಕನ ಕತೆಕೇಳಿ ಮದುವೆಯಾಗಲು ಒಪ್ಪುತ್ತಾನೆ. ಆದರೆ ಮದುವೆ ಸರಸಮ್ಮನ ಸಮಾದಿಯಲ್ಲಿಯೇ ಎಂದು ನಿರ್ಧರಿತವಾದಾಗ ಬೆಳ್ಳಕ್ಕ ಹಿಂದೆ ಸರಿಯುತ್ತಾಳೆ. ಆ ಸಮಾಧಿ ನನ್ನದೆ ಅಲ್ಲಿಗೆ ಹೋದರೆ ಅದೇ ಹಳೆಯ ಹಿಂಸೆಯ ಕ್ರೂರತೆಗಳು ಕಾಡುತ್ತವೆಎಂದು, ನಾನೇ ಸರಸಮ್ಮ ಎಂಬುದಾಗಿ ತಿಳಿಸುತ್ತಾಳೆ. ಸಂಪ್ರದಾಯದ ಒತ್ತಡಕ್ಕೆ ಬಲಿಯಾಗಿ ಸಮಾಧಿಯಾದರು ಮನಸ್ಸಿನ ಸಹಜ ಬಯಕೆಗಳು ಆಗೆಯೇ ಸರಸಮ್ಮ ಬಳ್ಳಕ್ಕಿಯ ಪ್ರೇತವಾಗಿ ಚಂದ್ರಣ್ಣನಲ್ಲಿ ಪ್ರೇಮ ಭಿಕ್ಷೆ ಬೇಡುವರೆಗೂ ಹೋಗುವುದು ಗಮನಾರ್ಹವಾದುದು.

ಸರಸಮ್ಮಳಂತೆ ಬದುಕಿನ ಸುಖಗಳಿಂದವಂಚಿತಳಾಗುವುದಕ್ಕಿಂತ 'ಕನ್ಯಾಬಲಿ'ಯ ಬಾಲ ವಿಧವೆ ಮಾಲತಿಯಂತೆ ಸುಖ ಪಡೆಯುವುದುವಾಸಿ ಎಂಬುದು ಕಾರಂತರ ಹಲವು ಕಾದಂಬರಿಗಳಲ್ಲಿ ವ್ಯಕ್ತಗೊಂಡಿದೆ. ಚಿಕ್ಕ ವಯಸ್ಸಿನಲ್ಲಿಯೇ ಗಂಡನ್ನನ್ನು ಕಳೇದುಕೊಂಡ ಮಾಲತಿ ಮರುಮದುವೆಗೆ ಆಕ್ಷೇಪಿಸಿ; ಸಾಧ್ಯವಾಗದಾದಾಗ ವೇಶ್ಯಯಾಗಿಯೇ ಸುಖ ಪಡೆಯುತ್ತಾಳೆ.

ಹಾಗೆ ನೋಡಿದರೆ ಕೌಟುಂಬಿಕ ಬದುಕಲ್ಲಿ ಗಂಡ ಹೆಂಡತಿ ಬಿಟ್ಟು ಉಳಿದವರು ಪಡೆಯುವ ಲೈಂಗಿಕ ಸುಖ ಕೆಟ್ಟದ್ದು, ವೇಶ್ಯ ವೃತ್ತಿಯದು ಎಂದು ಬಿಂಬಿತವಾಗಿದೆ. ಆದರೆ ಕಾರಂತರ 'ಕನ್ಯಾಬಲಿ' ಮತ್ತು ಮೈಮನಗಳ ಸುಳಿಯಲ್ಲಿ, ಕಾದಂಬರಿ ಮೈ ಮತ್ತು ಮನಸ್ಸು ಹೊಂದಾದ ಬದುಕು ಅಸಹಜವಾದುದಲ್ಲ, ಗರತಿಯಂತ ಬದುಕೇ ಅದು ಕೂಡ ಎಂದು ಹೇಳುವ ಮೂಲಕ ಮನೋವೈಜ್ಞಾನಿಕ ಚಿಂತನೆಯನ್ನು ಕಟ್ಟಿಕೊಟ್ಟಿದ್ದಾರೆ.

ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಬರುವ ಪುರುಷ ಪಾತ್ರಗಳಿಗಿಂತ, ಮಹಿಳಾ ಪಾತ್ರಗಳು ಮಹತ್ವದ್ದಾಗಿವೆ. ಪುರುಷ ಪಾತ್ರಗಳು ಬದುಕನ್ನು ತಿರಸ್ಕರಿಸಿ ಪಾತ್ರಗಳಾದರೆ, ಮಹಿಳಾ ಪಾತ್ರಗಳು ಬದುಕನ್ನು ಸ್ವೀಕರಿಸಿ ಬಾಳ್ವೆ ಮಾಡುವ ಪಾತ್ರಗಳಾಗಿವೆ.

**ಪರಾಮರ್ಶನ ಸಾಹಿತ್ಯ**

೧. ಮರಳಿ ಮಣ್ಣಿಗೆ – ಡಾ. ಕೆ. ಶಿವರಾಮಕಾರಂತ
೨. ಸನ್ಯಾಸಿಯ ಬದುಕು – ಡಾ. ಕೆ. ಶಿವರಾಮಕಾರಂತ
೩. ನಂಬಿದವರ ನಾಕ–ನರಕ – ಡಾ. ಕೆ. ಶಿವರಾಮಕಾರಂತ
೪. ಸರಸಮ್ಮನ ಸಮಾಧಿ – ಡಾ. ಕೆ. ಶಿವರಾಮಕಾರಂತ
೫. ಮೂಕಜ್ಜಿಯ ಕನಸುಗಳು – ಡಾ. ಕೆ. ಶಿವರಾಮಕಾರಂತ
೬. ಯುಗಧರ್ಮ ಮತ್ತು ಸಾಹಿತ್ಯ ದರ್ಶನ– ಕೀರ್ತಿನಾಥ ಕುರ್ತುಕೋಟಿ